ವಾರದ ಪತ್ರ

## ಧಾರಾವಾಹಿ: ಆದ್ಯತೆ ಯಾವುದಕ್ಕಿರಬೇಕು?

ದಿನವಿಡೀ ಪ್ರಸಾರಗೊಳ್ಳುವ ಕನ್ನಡ ವಾಹಿನಿಗಳ ಧಾರಾವಾಹಿಗಳ ಹೆಸರುಗಳು ಬೇರೆಯಾದರೂ ಕಥೆ ಒಂದೇ ರೀತಿ. ಬಹುತೇಕ ಧಾರಾವಾಹಿಗಳ ಸಂಚಿಕೆಯ ಅವಧಿ 30 ನಿಮಿಷ! ಜಾಹೀರಾತುಗಳಿಗೆ 10 ನಿಮಿಷ. ಇದರಲ್ಲಿ ಹಿಂದಿನ ಸಂಚಿಕೆ ಹಾಗೂ ಮುಂದಿನ ಭಾಗದಲ್ಲಿ ಎಂದು ಪದೇ ಪದೇ ತೋರಿಸುವ ದೃಶ್ಯಗಳ ಅವಧಿ 5 ನಿಮಿಷ. ಉಳಿದ ಕೇವಲ 15 ನಿಮಿಷ ಮಾತ್ರ ಆಯಾ ದಿನದ ಕಥಾ ಪ್ರಸಂಗ. ಜಾಹೀರಾತುಗಳು ವ್ಯಾವಹಾರಿಕ ದೃಷ್ಟಿಯಿಂದ ಅವಶ್ಯಕ. ಆದರೆ ಅಸಲಿ ಧಾರಾವಾಹಿಯ ಹಿಂದಿನ ಮತ್ತು ಮುಂದಿನ ಭಾಗದ ದೃಶ್ಯಗಳನ್ನು ಪದೇ ಪದೇ ನೋಡಲು ಬೇಸರ ಉಂಟು ಮಾಡುತ್ತದೆ. ಹಾಗಾಗಿ ನಾಲ್ಕು ವರ್ಷ ಕಳೆದರೂ ಧಾರಾವಾಹಿಗಳ ಕಥೆ ಮುಗಿಯುವುದಿಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು



## ರಕ್ತದಾನ: ತಪ್ಪು ಚಿತ್ರಣ ಸಲ್ಲ

ಸ್ಟಾರ್ ಸುವರ್ಣದ 'ಜೇನುಗೂಡು' ಧಾರಾವಾಹಿಯಲ್ಲಿ ಮಾಯಾ, ನಯನಾಳಿಗೆ ರಕ್ತವನ್ನು ಕೊಟ್ಟು ಬಹಳ ಉಪಕಾರ ಮಾಡಿದ್ದಾಳೆ. ರಕ್ತದಾನ ಮಾಡಿದರೆ ಮತ್ತೆ ಅದು ವೃದ್ಧಿಯಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ಸತ್ಯ. ಇಲ್ಲಿ ಮಾಯಾ ರಕ್ತ ಕೊಟ್ಟಿದ್ದಕ್ಕೆ ಸುಸ್ತಾಗುವಂತೆ ಬಿಂಬಿಸಿದ್ದು ಸರಿಕಾಣಲಿಲ್ಲ. ಇಂಥ ಚಿತ್ರಣ, ಅಗತ್ಯ ಇದ್ದವರಿಗೆ ರಕ್ತ ನೀಡಲು ಮುಂದಾಗುವ ದಾನಿಗಳನ್ನು ನಿರುತ್ಸಾಹಗೊಳಿಸುವಂತಹದ್ದು. ತುರ್ತು ನಿಗಾ ಘಟಕಗಳಲ್ಲಿ 24 ಗಂಟೆಗಳೂ ನರ್ಸ್ ಹಾಗೂ ಡಾಕ್ಟರ್ ಉಸ್ತುವಾರಿಯಲ್ಲಿ ರೋಗಿಗಳು ಇರುತ್ತಾರೆ. ನಯನಾ ಇರುವ ಐಸಿಯುನಲ್ಲಿ ಯಾವ ನರಪಿಳ್ಳೆಯೂ ಇಲ್ಲ. ಮಾಯಾ ಅವಳ ಜೊತೆ ನಡೆಸಿದ ಸಂಭಾಷಣೆ ನೋಡಿ ಆಶ್ಚರ್ಯವಾಯಿತು. ಇಂತಹ ವಿಷಯಗಳು ಜನರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ.

—ಶ್ಯಾಮಲಾ ಸತ್ಯ, ಬೆಂಗಳೂರು

## ಗೀತಾಳ ತಂಗಿಯನ್ನು ಎಲ್ಲಿಗೆ ಕಳಿಸಿದಿರಿ...

ಕಲರ್ಸ್ ಕನ್ನಡದ 'ಗೀತಾ' ಧಾರಾವಾಹಿಯಲ್ಲಿ ಗೀತಾಳ ಮದುವೆಯ ಸಂಭ್ರಮ ಕಳೆಗಟ್ಟಿದೆ. ಅವಳ ಅಪ್ಪ, ಗೀತಾ ತನ್ನ ಮಗಳಲ್ಲವೆಂದು ಧಾರೆ ಎರೆಯಲು ನಿರಾಕರಿಸುತ್ತಾನೆ. ತಮಗೆ ಮಕ್ಕಳಿಲ್ಲದ ಕೊರತೆಯನ್ನು ನೀಗಿಸಿದಳೆಂದೂ, ಅವಳನ್ನು ಧಾರೆ ಎರೆದು ಕೊಟ್ಟರೆ ಮುಂದಿನ ಜನ್ಮಕ್ಕೆ ಅವಳಂತಹ ಮಗಳು ಹುಟ್ಟುತ್ತಾಳೆ ಎಂದು ಅವನ ಪತ್ನಿ ಹೇಳುತ್ತಾಳೆ. ವಿಷಯ ಇದಲ್ಲ, ಧಾರಾವಾಹಿ ಪ್ರಾರಂಭದಲ್ಲಿ ಎರಡನೇ ಮಗಳೆಂದು ತೋರಿಸಿದ್ದ ಹುಡುಗಿ ಏನಾದಳು? ಧಾರಾವಾಹಿ ನಿರ್ದೇಶಕರು ಅದನ್ನು ಮರೆಯಬಹುದು. ಆದರೆ ಪ್ರೇಕ್ಷಕ ಮರೆಯುವುದಿಲ್ಲ.

—ಸೀತಾ ಎಸ್. ನಾರಾಯಣ, ಹರಿಹರ

## ಸ್ಪರ್ಧಾ ವಿಧಾನ 'ಥಟ್' ಅಂತ ಪ್ರಕಟಿಸಲಿ

ಚಂದನದ 'ಥಟ್ ಅಂತ ಹೇಳಿ' ತನ್ನದೇ ವೀಕ್ಷಕ ವರ್ಗವನ್ನು ಗಳಿಸಿದೆ. ಈ ಕಾರ್ಯಕ್ರಮದ ಸಾರಥಿ ನಾ. ಸೋಮೇಶ್ವರ ಅವರ ನಿರ್ವಹಣೆ ಚೆನ್ನಾಗಿರುತ್ತದೆ. ನೂರು ಅಂಕ ಗಳಿಸಿದ ಸ್ಪರ್ಧಿಗಳಿಗೆ ಪುಸ್ತಕಗಳ ಜೊತೆ ಒಂದು ಅಡಕ ಮುದ್ರಿಕೆಯನ್ನು ಈ ಮೊದಲು ನೀಡುತ್ತಿದ್ದರು. ಈಗ ಅದರ ಬದಲಿಗೆ ವಿಶೇಷ ಪುಸ್ತಕ ನೀಡಲಾಗುವುದು ಎಂದು ಹೇಳಿರುವುದು ಸಂತೋಷದ ವಿಷಯ. ಆದರೆ ಹಳೆಯ ಕಂತುಗಳೇ ಪ್ರಸಾರವಾಗುತ್ತಿರುವುದು ಬೇಸರ ಮೂಡಿಸಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಸ್ಪರ್ಧಿಗಳಿಗೆ ಅರ್ಜಿ ಸಲ್ಲಿಸುವ ವಿಧಾನವನ್ನು ಪ್ರಕಟಿಸಿದರೆ ಅನುಕೂಲವಾಗುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ



## ನೃತ್ಯದ ಕಸರತ್ತಿಗೆ ಎಳೆಯರು ಯಾಕೆ?

ಝೀ ಕನ್ನಡದ 'ಡಾನ್ಸ್ ಕರ್ನಾಟಕ ಡಾನ್ಸ್' ರಿಯಾಲಿಟಿ ಶೋನಲ್ಲಿ ಚಿಕ್ಕ ಮಕ್ಕಳಿಂದ ಕಾರ್ಯಕ್ರಮ ನಡೆಸುತ್ತಾರೆ. ಅದರಲ್ಲಿ ಹಲವು ಡಾನ್ಸ್ ಹೆಸರಿಗೆ ಮಾತ್ರ. ವಾಸ್ತವದಲ್ಲಿ ಅವು ಸರ್ಕಸ್ ಪ್ರತಿರೂಪ. ಈ ರೀತಿಯಲ್ಲಿ ಮಕ್ಕಳ ಬಳಕೆ ಎಷ್ಟರಮಟ್ಟಿಗೆ ಸರಿ? ಇಂಥ ಪ್ರದರ್ಶನಗಳಲ್ಲಿ ಭಾಗವಹಿಸುವುದಕ್ಕೆ ವಯೋಮಾನದ ಮಿತಿಯನ್ನೂ ವಿಧಿಸಿಲ್ಲ. ಮಕ್ಕಳ ಪೋಷಕರಿಗೆ ಇದರ ಪರಿವೆಯೇ ಇಲ್ಲವೆನಿಸುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮತ್ತೆ ಹಾಡಲಿ ಸರಿಗಮಪ

ಝೀ ಕನ್ನಡದಲ್ಲಿ 'ಸರಿಗಮಪ' ಮತ್ತೆ ಪ್ರಾರಂಭವಾಗಲಿ. ವಾರಾಂತ್ಯದ 'ಡಿಕೆಡಿ' ಚೆನ್ನಾಗಿ ಮೂಡಿಬರುತ್ತಿದೆ. ತೀರ್ಪುಗಾರರ ಸ್ಥಾನದಲ್ಲಿರುವ ಶಿವರಾಜ್ ಕುಮಾರ್ ಉತ್ತಮ ಡಾನ್ಸರ್‌ಗಳಿಗೆ ಉತ್ತೇಜನದ ಮಾತುಗಳನ್ನು ಹೇಳುತ್ತಾರೆ. ಜೊತೆಗೆ ಉತ್ತಮ ಮಾರ್ಗದರ್ಶನ ನೀಡುತ್ತಿರುವುದು ಖುಷಿ ಕೊಡುತ್ತದೆ. ನಿರೂಪಕಿ ಅನುಶ್ರೀ ಅವರು ಹೆಚ್ಚು ಮಾತನಾಡಿ ಸಮಯ ಕಳೆಯುತ್ತಾರೆ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## 'ಗಿಣಿರಾಮ' ಭಾಳ ಛಲೋ ಇತ್ತು

ಕಲರ್ಸ್ ಕನ್ನಡದ 'ಗಿಣಿರಾಮ' ಭಾಳ ಛಲೋ ಇತ್ತು. ಮಹತಿ, ಶಿವರಾಮ ದಂಪತಿ ನಡುವಿನ ಜಗಳ, ಪ್ರೀತಿ ನೋಡ್ಲಿಕ್ಕೆ ಚಂದ ಇತ್ತು. ಪ್ರತಿ ಪಾತ್ರಗಳೂ ಜೀವ ತುಂಬಿ ಅಭಿನಯಿಸುತ್ತಿದ್ದರು. ಭಾಷೆ, ವಸ್ತ್ರ ವಿನ್ಯಾಸ ಉತ್ತರ ಕರ್ನಾಟಕದ ಸೊಗಡಿಗೆ ಮುಕ್ಕಾಗದಂತೆ ತಂದಿದ್ದಾರೆ.

ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವ ಬಗೆಯನ್ನು ದೇಶಪಾಂಡೆ ಪಾತ್ರ ತೋರಿತು. ಭವಾನಿ ಬ್ಯಾಡಗಿ ಪಾತ್ರ ಕಳೆಗಟ್ಟುವ ಹಾಗಿತ್ತು. ಕುಟುಂಬ ಮತ್ತು ಬಾಂಧವ್ಯ ಮೆಚ್ಚುವಂತೆ ಇತ್ತು.

—ನಾರಾ ಜ್ಯೋತಿ, ಬೆಂಗಳೂರು

## ಕನ್ನಡ ಶಿಕ್ಷಕರಿಗೆ ಬೆಲೆಯಿಲ್ಲವೆ?

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರಗೊಳ್ಳುವ ದೃಶ್ಯವೊಂದರಲ್ಲಿ, ಕಾವೇರಿ ಶಾಲೆಯಲ್ಲಿ ಉಪಾಧ್ಯಾಯರು ಕನ್ನಡ ಶಿಕ್ಷಕರಾಗುವುದು ಕನಿಷ್ಠ ಎನ್ನುವ ಭಾವನೆಯಿದೆ. ಅವರ ಪ್ರಕಾರ, ಎಂಜಿನಿಯರ್ ಅಥವಾ ವೈದ್ಯರು ಆಗುವುದೇ ಹೆಚ್ಚುಗಾರಿಕೆ. ಅವರು ಮಾತ್ರ ಬುದ್ಧಿವಂತರು ಎನ್ನುವಂತೆ ಹೇಳುತ್ತಿರುವುದು ಕನ್ನಡ ನಾಡು ನುಡಿಗೆ ಮಾಡುವ ಅವಮಾನ.

—ಬಿ. ಚಾಮರಾಜ ಅರಸ್, ಮೈಸೂರು

